**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**
**ಸಿ.ಸಿ ನಂ. 2136/2016**

| | | |
|---|---|---|
| ಹೆಸರು | : | ದುರ್ಗಪ್ಪ |
| ತಂದೆಯ ಹೆಸರು | : | ಕೆಂಚಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಮುಖ್ಯಪೇದೆ, ಹೆಚ್ ಎಸ್ ಆರ್ ಲೇಔಟ್ ಪೋಲಿಸ್ ಠಾಣೆ |
| ವಾಸ | : | ಬೆಂಗಳೂರು |

**PW-3, CW-6**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 16-11-2024.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ನಾನು 2012 ನೇ ಸಾಲಿನಿಂದ 2013 ರವರೆಗೆ ಚಿಕ್ಕಜಾಲ ಸಂಚಾರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.19-02-2016 ರಂದು ಬೆಳಿಗ್ಗೆ 7.00 ಗಂಟೆಯಿಂದ ಮದ್ಯಾಹ್ನ 2.00 ಗಂಟೆಯವರೆಗೆ 'ಎ' ಪಹಳೆಯಲ್ಲಿ ಎಮ್ ವಿ ಐ ಟಿ ಕ್ರಾಸ್ ಹತ್ತಿರ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಳಗ್ಗೆ 9.30 ಗಂಟೆಯ ಸಮಯದಲ್ಲಿ ಅಂಬ್ರೆಲಾ ಜಂಕ್ಷನ್ ಬಳಿ ಇರುವಾಗ ಒಬ್ಬ ಹೆಂಗಸು ಪೂರ್ವದಿಂದ ಪಶ್ಚಿಮದ ಕಡೆಗೆ ರಸ್ತೆ ದಾಟುತ್ತಿರುವಾಗ ಒಂದು ಮಾರು ಸ್ವೀಪ್ಟ್ ಕಾರು ದೇವನಹಳ್ಳಿ ಕಡೆಯಿಂದ ಬೆಂಗಳೂರು ನಗರದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ಸದರಿ ರಸ್ತೆ ದಾಟುತ್ತಿದ್ದ ಮಹಿಳೆಗೆ ಡಿಕ್ಕಿಪಡಿಸಿದ್ದು, ಅವಳ ಕೈಯಲ್ಲಿದ್ದ ಬ್ಯಾಗುಗಳು ಮತ್ತು ಸದರಿ ಮಹಿಳೆಯು ಡಿಕ್ಕಿ ಪಡಿಸಿದ ಕಾರಿನ ಮುಂಭಾಗದ ಗ್ಲಾಸ್ ಮೇಲೆ ಬಿದ್ದು, ಕೆಳಗೆ ಬಿದ್ದಿರುತ್ತಾರೆ. ನಾನು ಕೂಡಲೇ ಸ್ದಳಕ್ಕೆ ಹೋಗಿ ನೋಡಲಾಗಿ ಸದರಿ ಮಹಿಳೆಯ ಕೈ, ತಲೆ ಮತ್ತು ಕಿವಿಗೆ ಬಲವಾದ ಪೆಟ್ಟುಬಿದ್ದು ಪ್ರಜ್ಞಾಹೀನಳಾಗಿರುತ್ತಾಳೆ. ನಂತರ ಜಂಕ್ಷನ್ ಬಳಿ ಇದ್ದ ಚಾಸಾ-1 ರವರು ಕೂಡಲೇ ಸ್ದಳಕ್ಕೆ ಬಂದು ಅಂಬುಲೆನ್ಸ್ ಗೆ ಕರೆಮಾಡಿ ಚಾಸಾ-1 ರವರ ಆದೇಶದಂತೆ ಚಿಕಿತ್ಸೆಗಾಗಿ ಸದರಿ ಮಹಿಳೆಯನ್ನು ಹೆಬ್ಬಾಳದ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಆಸ್ಪತ್ರೆಗೆ ಅವರ ಮಗನಾದ ಚಾಸಾ-5 ರವರು ಬಂದಿರುತ್ತಾರೆ. ಸದರಿ ಅಪಘಾತಕ್ಕೊಳಗಾದ ಮಹಿಳೆಯ ಹೆಸರು ಮತ್ತು ವಿಳಾಸವನ್ನು ಚಾಸಾ-5 ರವರಿಗೆ ಕೇಳಲಾಗಿ ಸದರಿ ಮಹಿಳೆಯ ಹೆಸರು ನಿಶಾಮಿಶ್ರ ಕೊಂ ಮುರುಳೀದರ್, 50 ವರ್ಷ, ಪರೀದಾಬಾದ್ ಹರಿಯಾಣ ರಾಜ್ಯ ಎಂದು ತಿಳಿಸಿರುತ್ತಾರೆ. ನಂತರ ಸದರಿ ಆಸ್ಪತ್ರೆಯ ವೈದ್ಯಾದಿಕಾರಿಗಳು ಅಪಘಾತಕ್ಕೊಳಗಾದ ಹೆಂಗಸನ್ನು ಪರೀಕ್ಷಿಸಿ, ಸದರಿ ಮಹಿಳೆಯು

ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನಾನು ಚಾಸಾ-21 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತೇನೆ. ಸದರಿ ಡಿಕ್ಕಿ ಪಡಿಸಿದ ಕಾರ್ ಸಂಖ್ಯೆ ಕೆಎ-03-ಎಮ್ ಜೆ -9903 ಮಾರುತಿ ಸ್ವಿಫ್ಟ್ ಕಾರ್ ಆಗಿರುತ್ತದೆ. ಸದರಿ ಕಾರಿನ ಚಾಲಕ ನ್ಯಾಯಾಲಯದ ಮುಂದಿರುವ ಆರೋಪಿತನಾಗಿರುತ್ತಾನೆ. ಸದರಿ ಹೆಂಗಸು ಗಾಯಗೊಂಡು ಮೃತಪಡಲು ನ್ಯಾಯಾಲಯದ ಮುಂದಿರುವ ಆರೋಪಿತನ ಅತಿವೇಗದ ಚಾಲನೆಯೇ ಕಾರಣವಾಗಿರುತ್ತದೆ. ಈ ಬಗ್ಗೆ ತನಿಖಾದಿಕಾರಿಗಳಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿಯಿಂದ**

ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಗೈರುಹಾಜರಿದ್ದು, ಆರೋಪಿ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಸಕಾರಣಗಳು ಕಂಡುಬರದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.